ಸರ್ಕಾರ ಹೇಗೆ ತನ್ನ ಅಂತರ್ಗತವಾದಂತಹ ವಿವೇಚನೆಯನ್ನು ಉಪಯೋಗಿಸಿಕೊಂಡಿತ್ತೋ ಹಾಗೆನೇ ಇಲ್ಲಿ ಕೂಡ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿಯ ರಚನೆ ಆಗುತ್ತದೆ. ಆದರೆ ಸದಸ್ಯರನ್ನು ಮಾಡುವಾಗ ಸರ್ಕಾರ ವಿವೇಚನೆಯನ್ನು ಉಪಯೋಗಿಸುತ್ತದೆ.

ಅಧ್ಯಕ್ಷರು: ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀಮತಿ ಸುನೀತಾ ವೀರಪ್ಪಗೌಡ ಜೆ.: ಸನ್ಮಾನ್ಯ ಅಧ್ಯಕ್ಷರೆ, ನನ್ನದೊಂದು ಪ್ರಶ್ನೆ ಇದೆ.

ಅಧ್ಯಕ್ಷರು: ಈಗ ಒಂದು ಗಂಟೆ ಪ್ರಶ್ನೋತ್ತರ ಅವಧಿ ಮುಗಿದು ಹೋಯಿತು. ನಾನು ಕರೆದಾಗ ನೀವು ಇರಲಿಲ್ಲ. ಆದ್ದರಿಂದ ಈಗ ಏನೂ ಮಾಡುವುದಕ್ಕೆ ಸಾಧ್ಯ ಆಗುವುದಿಲ್ಲ. ನೀವು ಕಾಲಕ್ಕೆ ಸರಿಯಾಗಿ ಬರದೇ ಇದ್ದರೆ ಏನು ಮಾಡುವುದಕ್ಕೆ ಆಗುತ್ತದೆ? ಅದಲ್ಲದೇ ಒಂದು ಗಂಟೆ ಮುಗಿದು ಹೋಗಿದೆ.

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೇ ದಯವಿಟ್ಟು ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಆಯಿತು, ನಿಮ್ಮಿಬ್ಬರಿಗೂ ಅವಕಾಶ ಮಾಡಿಕೊಡುತ್ತೇನೆ. ಈಗ ನೀವು ಎರಡೆರಡು ನಿಮಿಷದಲ್ಲಿ ಮುಗಿಸಬೇಕು.

ಶ್ರೀಮತಿ ಸುನೀತಾ ವೀರಪ್ಪಗೌಡ ಜೆ.: ದಯಮಾಡಿ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಆಯಿತು. ಸುನೀತಾ ಅವರದ್ದು ಆದ ಮೇಲೆ ದಿನೇಶ್ ಗುಂಡೂರಾವ್ ಅವರು ಪ್ರಶ್ನೆ ಕೇಳಲಿ.

ಬನ್ನೂರು ಕ್ಷೇತ್ರದಲ್ಲಿರುವ ಚಾಮುಂಡೇಶ್ವರಿ ಮತ್ತು ವಿಲ್ಸನ್ ಡಿಸ್ಟಲರಿಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ ವಸ್ತುಗಳ ವಿಲೇವಾರಿ

197 (2919) ಶ್ರೀಮತಿ ಸುನಿತ ವೀರಪ್ಪಗೌಡ ಜೆ. (ಬನ್ನೂರು): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬನ್ನೂರು ಕ್ಷೇತ್ರದಲ್ಲಿರುವ ಚಾಮುಂಡೇಶ್ವರಿ ಡಿಸ್ಟಲರಿ ಮತ್ತು ವಿಲ್ಸನ್ ಡಿಸ್ಟಲರಿಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ ವಸ್ತುಗಳಿಂದ ಜನ ಜಾನುವಾರುಗಳಿಗೆ ತೊಂದರೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳಾವುವು;

ಇ) ಇದರಿಂದ ಆಗುವ ತೊಂದರೆಯನ್ನು ತಪ್ಪಿಸಲು ಇವುಗಳನ್ನು ರದ್ದುಪಡಿಸುವ ಯೋಚನೆ ಸರ್ಕಾರದ ಮುಂದಿದೆಯೇ (ವಿವರ ನೀಡುವುದು)?

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಬನ್ನೂರು ಕ್ಷೇತ್ರದಲ್ಲಿರುವ ಚಾಮುಂಡಿ ಡಿಸ್ಟಲರಿಯು ತ್ಯಾಜ್ಯ ವಸ್ತುಗಳನ್ನು ಉದ್ದಿಮೆಯ ಆವರಣದಲ್ಲಿಯೆ ಸಂಗ್ರಹಿಸಿ, ಸಂಸ್ಕರಿಸಿ, ವಿಲೇವಾರಿ ಮಾಡುತ್ತಿರುವುದರಿಂದ ಜನ ಜಾನುವಾರುಗಳಿಗೆ ತೊಂದರೆಯಾಗಿರುವುದಿಲ್ಲ.

ವಿಲ್ಸನ್ ಡಿಸ್ಟಲರಿಯಿಂದ ಜುಲೈ 2004 ರಿಂದ ಆಗಿಂದಾಗ್ಗೆ ಕಲುಷಿತ ನೀರು ಚಿಕ್ಕದೇವರಾಯ ನಾಲೆಗೆ ಸೇರಿದ ಪ್ರಕರಣಗಳ ಬಗ್ಗೆ ಸ್ಥಳೀಯರಿಂದ ದೂರು ಬಂದಿರುತ್ತದೆ.

ಆ) ವಿಲ್ಸನ್ ಡಿಸ್ಟಲರಿಗೆ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974ರ ಕಲಂ 32(1)(ಸಿ) ಅಡಿಯಲ್ಲಿ ಮದ್ಯಸಾರ ಘಟಕದಿಂದ ಕಲುಷಿತ ನೀರನ್ನು ಹೊರಬಿಡದಂತೆ ದಿನಾಂಕ: 19.11.2004 ರಂದು ನಿಷೇದಾಜ್ಞೆ ನೀಡಲಾಗಿದೆ.

ತದನಂತರ ದಿನಾಂಕ: 29.1.2005 ರಂದು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974ರ ಕಲಂ 33(ಎ) ಅಡಿಯಲ್ಲಿ ಉದ್ದಿಮೆಯನ್ನು ಮುಚ್ಚುವಂತೆ ಆದೇಶಿಸಲಾಗಿದೆ. ದಿನಾಂಕ: 29.1.2005 ರಿಂದ ಉದ್ದಿಮೆಯು ಮದ್ಯಸಾರ ಘಟಕವನ್ನು ಮುಚ್ಚಿರುತ್ತದೆ. ಆದರೆ ಉದ್ದಿಮೆಯು ಅರ್ಕಾಕ್ ಸಾಚೆಟಿಂಗ್ ಮಾತ್ರ ನಡೆಸುತ್ತಿದೆ. ಇದರಿಂದ ತ್ಯಾಜ್ಯ ವಸ್ತುಗಳು ಉತ್ಪತ್ತಿಯಾಗುವುದಿಲ್ಲ.

ಇ) ವಿಲ್ಸನ್ ಡಿಸ್ಟಲರಿ ವಿರುದ್ಧ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974ರ ಅಡಿಯಲ್ಲಿ ಜರುಗಿಸಬೇಕಾಗಿರುವ ಕ್ರಮಗಳನ್ನು ಜರುಗಿಸಲಾಗಿದೆ ಮತ್ತು ಮದ್ಯಸಾರ ಘಟಕವನ್ನು ದಿನಾಂಕ: 29.1.2005 ರಿಂದ ಮುಚ್ಚಿರುತ್ತದೆ.

ಶ್ರೀಮತಿ ಸುನೀತಾ ವೀರಪ್ಪಗೌಡ ಜೆ.: ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ಸಚಿವರು ದ್ವಂದ್ವ ಉತ್ತರ ನೀಡಿದ್ದಾರೆ. ಒಂದು ಕಡೆ ಉತ್ತರದಲ್ಲಿ 'ವಿಲ್ಸನ್ ಡಿಸ್ಟಿಲರೀಸ್‌ನಿಂದ ಜುಲೈ 2004 ರಿಂದ ಆಗಿಂದಾಗ್ಗೆ ಕಲುಷಿತ ನೀರು ಚಿಕ್ಕದೇವರಾಯ ನಾಲೆಗೆ ಸೇರಿದ ಪ್ರಕರಣಗಳ ಬಗ್ಗೆ ಸ್ಥಳೀಯರಿಂದ ದೂರು ಬಂದಿರುತ್ತದೆ' ಎಂದು ತಿಳಿಸಿದ್ದರೆ, ಇನ್ನೊಂದೆಡೆ 'ಜನ-ಜಾನುವಾರುಗಳಿಗೆ ತೊಂದರೆಯಾಗಿರುವುದಿಲ್ಲ' ಎಂತಲೂ ಹೇಳಿದ್ದಾರೆ. ನಿಜವಾಗಿಯೂ, ಅಲ್ಲಿರುವ ಸುತ್ತಮುತ್ತಲಿನ 15 ಹಳ್ಳಿಗಳಿಗೆ ವಿಲ್ಸನ್ ಮತ್ತು ಚಾಮುಂಡೇಶ್ವರಿ ಡಿಸ್ಟಿಲರೀಸ್‌ಗಳಿಂದ ತುಂಬಾ ತೊಂದರೆಯುಂಟಾಗುತ್ತಿದೆ. ಡಿಸ್ಟಿಲರಿಗಳು ಕಾಲುವೆಗೆ ಕಲುಷಿತ ನೀರನ್ನು ಹರಿಬಿಟ್ಟಿರುವುದರಿಂದ ಜನ-ಜಾನುವಾರುಗಳು ಅದನ್ನೇ ಕುಡಿಯಬೇಕಾದ ಪರಿಸ್ಥಿತಿಯುಂಟಾಗಿದೆ. ಅಲ್ಲಿನ ರಸ್ತೆಗಳು ಸರಿ ಇಲ್ಲದಿರುವುದರಿಂದ ಮತ್ತು ದಿನದ 24 ಗಂಟೆಗಳ ಕಾಲ ಹದಗೆಟ್ಟ ರಸ್ತೆಗಳಲ್ಲಿ ವಾಹನಗಳು ಚಲಿಸುತ್ತಿರುವುದರಿಂದ ರಸ್ತೆಯ ಧೂಳು ರೈತರ ಜಮೀನಿಗೆ ಹರಡುತ್ತಿದೆ ಅಲ್ಲದೆ, ಇದರಿಂದ ಅಂಗಡಿಗಳ ವ್ಯಾಪಾರಕ್ಕೂ ತೊಂದರೆಯಾಗಿದೆ. ಮುಖ್ಯವಾಗಿ, ವ್ಯವಸಾಯಕ್ಕೆ ಮತ್ತು ಜನರ ದಿನನಿತ್ಯದ ಜೀವನಕ್ಕೆ ತುಂಬಾ ತೊಂದರೆಯಾಗಿದೆ. ಇಷ್ಟೇ ಅಲ್ಲದೆ, ರಾತ್ರಿ 11-12 ಗಂಟೆಗೆ ಯಾವುದೋ ಒಂದು ರೀತಿಯ ಗ್ಯಾಸ್ ಅನ್ನು ಡಿಸ್ಟಿಲರಿಯವರು ರಿಲೀಸ್ ಮಾಡುತ್ತಾರೆ. ಇದರಿಂದಾಗಿ ಜನರು ಬನ್ನೂರಿನಲ್ಲಿರುವುದಕ್ಕೆ ಕೂಡ ಸಾಧ್ಯವಾಗುವುದಿಲ್ಲ. ಟ್ಯಾಂಕರ್‌ಗಳ ಮೂಲಕ ಕಲುಷಿತ ನೀರನ್ನು ತೆಗೆದುಕೊಂಡುಹೋಗಿ 'ಫರ್ಟಿಲೈಜರ್' ಎಂದು ಹೇಳಿ ರೈತರ ಜಮೀನಿಗೆ ಬಿಡುತ್ತಾರೆ. ಇದರಿಂದ ರೈತರ ಜಮೀನು

ಗುಣಮಟ್ಟವನ್ನು ಕಳೆದುಕೊಳ್ಳುವಂಥ ತೊಂದರೆ ಬಂದಿದೆ. ಆದಕಾರಣ, ಮಾನ್ಯ ಸಚಿವರು ಇದರ ಬಗ್ಗೆ ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕಾ ಸಚಿವರು) (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ವಿಲ್ಸನ್ ಡಿಸ್ಟಿಲರಿಯಿಂದ ತೊಂದರೆಯಾಗುತ್ತಿರುವುದು ನಿಜ. ಅದಕ್ಕೋಸ್ಕರ, ಸದರಿ ಡಿಸ್ಟಿಲರಿಯನ್ನು ಮುಚ್ಚಿಸಲಾಗಿದೆ ಇದು ಮಾನ್ಯ ಸದಸ್ಯರ ಗಮನಕ್ಕೆ ಬಂದಿರಲಿಕ್ಕೂ ಸಾಕು. ಆದರೆ, ನನಗೆ ಬಂದಿರುವ ವರದಿಗಳ ಪ್ರಕಾರ ಮತ್ತೊಂದು ಚಾಮುಂಡೇಶ್ವರಿ ಡಿಸ್ಟಿಲರಿಯಿಂದ ಯಾವುದೇ ರೀತಿಯಿಂದ ತೊಂದರೆಯಾಗುತ್ತಿಲ್ಲ. ಈ ಡಿಸ್ಟಿಲರಿಯಿಂದ ತೊಂದರೆಯಾಗುತ್ತಿದೆಯೆಂದು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿರುವುದರಿಂದ, ನಾನು ಸಂಬಂಧಪಟ್ಟ ಇಲಾಖೆಯಿಂದ ವಿಚಾರಿಸಿ ತಾವು ಹೇಳಿರುವ ರೀತ್ಯ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡುತ್ತೇನೆ.

ಶ್ರೀಮತಿ ಸುನೀತಾ ವೀರಪ್ಪಗೌಡ ಜೆ.: ಆ ಡಿಸ್ಟಿಲರಿಯಿಂದ ತೊಂದರೆಯಾಗುತ್ತಿದೆ. ಏಕೆಂದರೆ ಸುಮಾರು ವರ್ಷಗಳಿಂದಲೂ ಸದನದಲ್ಲಿ ಈ ಪ್ರಶ್ನೆ ಪ್ರಸ್ತಾಪವಾಗುತ್ತಿದೆ. ಮಹಿಳೆಯರಿಗಂತೂ ಇದರಿಂದ ತುಂಬಾ ತೊಂದರೆಯಾಗುತ್ತಿದೆ. ಹದಗೆಟ್ಟಿರುವ ಅಲ್ಲಿನ ರಸ್ತೆಗಳಲ್ಲಿ ಬಸ್ಸುಗಳು ಸಂಚರಿಸಲು ಸಾಧ್ಯವಿಲ್ಲ. ಅಲ್ಲಿನ ಜನರ ಆರೋಗ್ಯ ಸ್ಥಿತಿ ಸರಿಯಿಲ್ಲ. ಅಲ್ಲಿನ ಗ್ರಾಮಗಳಲ್ಲಿ ಹಿಂದುಳಿದ ಜನಾಂಗದವರು ವಾಸಿಸುತ್ತಿದ್ದು, ಹದಗೆಟ್ಟ ಆರೋಗ್ಯವನ್ನು ಆಸ್ಪತ್ರೆಗೆ ತೆರಳಿ ಸರಿಪಡಿಸಿಕೊಳ್ಳಲು ಅವರ ಬಳಿ ಹಣವಿಲ್ಲ. ಆದಕಾರಣ, ಅಲ್ಲಿ ಉಂಟಾಗುತ್ತಿರುವ ವಾಯು ಮಾಲಿನ್ಯವನ್ನು ತಡಗಟ್ಟಬೇಕೆಂದು ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಈಗಾಗಲೇ ಹೇಳಿರುವಂತೆ, ಅಲ್ಲಿನ ವಿಲ್ಸನ್ ಡಿಸ್ಟಿಲರಿಯಿಂದ ತೊಂದರೆಯಾಗುತ್ತಿದ್ದುದನ್ನು ಗಮನಿಸಿ ಅದನ್ನು ಸರ್ಕಾರದ ವತಿಯಿಂದ ಮುಚ್ಚಿಸಲಾಗಿದೆಯೆಂದು ತಿಳಿಸಲಾಗಿದೆ. ಈಗ ಚಾಮುಂಡೇಶ್ವರಿ ಡಿಸ್ಟಿಲರಿಯಿಂದ ತೊಂದರೆಯಾಗುತ್ತಿದ್ದರೆ, ಆ ಬಗ್ಗೆಯೂ ಕೂಡ ಪರಿಶೀಲಿಸುತ್ತೇನೆ ಎನ್ನುವ ಭರವಸೆ ಕೊಡುತ್ತೇನೆ.

ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಗ್ರಾಮೀಣ ಕ್ರೀಡಾಪಟುಗಳಿಗೆ ಪ್ರೋತ್ಸಾಹ

204 (2075) ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ): ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಕ್ರೀಡಾಪಟುಗಳಿಗೆ ಮೂಲಭೂತ ಸೌಕರ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಉದಯೋನ್ಮುಖ ಗ್ರಾಮೀಣ ಕ್ರೀಡಾಪಟುಗಳನ್ನು ಗುರುತಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;